# ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ಕಲಘಟಗಿ

**ಸಿಸಿ ನಂ 56/2021**

**ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ 05-05-2025 ರಂದು ಪ್ರಮಾಣ ಮಾಡಿಸಲಾಯಿತು**

| | | | |
|---|---|---|---|
| **ಸಾಕ್ಷಿಯ ಹೆಸರು** | ಃ | ಮಹದೇವಪ್ಪ | **ಪ್ರಾ.ಸಾ ಃ 04** |
| **ತಂದೆ ಃ ಗಂಡ ಹೆಸರು** | ಃ | ಕುಬೇರಪ್ಪ ಸಿಂಪಿ | **ಚಾ.ಸಾ ಃ 04** |
| **ವಯಸ್ಸು** | ಃ | 50 ವರ್ಷ | |
| **ಉದ್ಯೋಗ** | ಃ | ಶಿರಸ್ತೇದಾರ, 73- ಹುಬ್ಬಳ್ಳಿ ಧಾರವಾಡ ಕೇಂದ್ರ ಚುನಾವಣಾ ವಿಭಾಗ ಹುಬ್ಬಳ್ಳಿ | |
| **ವಾಸಸ್ಥಳ** | ಃ | ಹುಬ್ಬಳ್ಳಿ | |

**ಮುಖ್ಯ ವಿಚಾರಣೆ ಃ ಮಾನ್ಯ ಸ.ಸ.ಅ. ರವರಿಂದಃ**

ನಾನು 2014 ರಿಂದ 2021 ರವರೆಗೆ ಕಲಘಟಗಿಯ ತಹಶೀಲ್ದಾರ ಕಚೇರಿ, ಕಲಘಟಗಿ ಹೋಬಳಿ ಕಂದಾಯ ನಿರೀಕ್ಷಕರು ಎಂದು ಕರ್ತವ್ಯನಿರ್ವಹಿಸಿದ್ದೇನೆ. ನನಗೆ ಚಾಸಾ-5 ರವರ ಪರಿಚಯ ಇದೆ. ಸುಮಾರು 2 ವರ್ಷಗಳ ಹಿಂದೆ ಸದರಿಯವರು ಮೃತಪಟ್ಟಿರುತ್ತಾರೆ.

ದಿನಾಂಕ 30.10.2017 ರಂದು ಕಲಘಟಗಿ ಪೋಲೀಸರು ಪಂಚನಾಮೆ ಸಲುವಾಗಿ ನನ್ನನ್ನು ಮತ್ತು ಚಾಸಾ-5 ರವರನ್ನು ಠಾಣೆಗೆ ಕರೆಸಿದ್ದರು. ನಮ್ಮ ಸಮಕ್ಷಮ ಕಾರು ಖರೀದಿಸುವ ಸಂದರ್ಭದಲ್ಲಿ ಆದ ಮೋಸದ ವಿಚಾರವಾಗಿ ದಾಖಲೆಗಳನ್ನು ತನಿಖೆ ಸಲುವಾಗಿ ಚಾಸಾ-1 ರವರು ಹಾಜರ ಪಡಿಸಿದ ದಾಖಲೆಗಳನ್ನು ಜಪ್ತಿ ಪಡಿಸಿಕೊಂಡು ಪಂಚನಾಮೆ ಜರುಗಿಸಿರುತ್ತಾರೆ. ನಾನು ಸದರಿ ಪಂಚನಾಮೆಗೆ ಸಾಕ್ಷಿ ಎಂದು ಸಹಿ ಮಾಡಿರುತ್ತೇನೆ. ನಿಪಿ-2 ರಲ್ಲಿರುವ ತನ್ನ ಸಹಿಯನ್ನು ನೋಡಿ ಸಾಕ್ಷಿ ಗುರುತಿಸಿದ್ದು ಅದನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ಪೋಟೋ ತೆಗೆದಿರುತ್ತಾರೆ. ಪೋಟೋವನ್ನು ಈಗಾಗಲೇ ನಿಪಿ-3 ಎಂದು ಗುರುತಿಸಲಾಗಿದ್ದು ಸಾಕ್ಷಿ ಅದನ್ನು ನೋಡಿ ಗುರುತಿಸಿರುತ್ತಾರೆ, ಪಂಚನಾಮೆ ಸಮಯದಲ್ಲಿ ಚಾಸಾ-1 ಹಾಗೂ 5 ರವರು ಹಾಜರಿದ್ದರು. ಮಧ್ಯಾಹ್ನ 3-45 ರಿಂದ 5-00 ರವರೆಗೆ ಪಂಚನಾಮೆ ಜರುಗಿಸಿರುತ್ತಾರೆ. ನಿಪಿ-2 ರಂತೆ ನಿಪಿ-4 ರಿಂದ 16 ದಾಖಲೆಗಳನ್ನು ಜಪ್ತಿ ಪಡಿಸಿಕೊಂಡಿರುತ್ತಾರೆ. ಅವುಗಳನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ. ಪಂಚನಾಮೆಯನ್ನು ಓದಿ ತಿಳಿದುಕೊಂಡು ಅದಕ್ಕೆ ಸಹಿ ಮಾಡಿರುತ್ತೇನೆ.

**ಪಾಟೀ ಸವಾಲುಃ 3 ನೇ ಆರೋಪಿ ಪರ ಶ್ರೀ ಎನ್ ಎಸ್ ಯು ವಕೀಲರಿಂದಃ**

ಪಂಚನಾಮೆಯನ್ನು ಪೋಲೀಸ ಠಾಣೆಯಲ್ಲಿ ಬೆರಳಚ್ಚು ಮಾಡಿಸಿದ್ದಾರೆ. ಯಾರು ಬೆರಳಚ್ಚು ಮಾಡಿಸಿದ್ದಾರೆ ಗೊತ್ತಿಲ್ಲ. ಯಾವ ಯಾವ ದಾಖಲೆಗಳನ್ನು ಜಪ್ತಿ ಪಡಿಸಿಕೊಂಡಿದ್ದಾರೆ ಎಂದು ಅವುಗಳ ಬಗ್ಗೆ ಹೇಳಲು ಬರುವುದಿಲ್ಲ ಆದರೆ ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. ದಾಖಲೆಗಳನ್ನು ಚಾಸಾ-1 ರವರು ಹಾಜರ ಪಡಿಸಿರುತ್ತಾರೆ. ದಾಖಲೆಗಳನ್ನು ಹಾಜರ ಪಡಿಸಲು ಚಾಸಾ-1 ರವರು ಮೇಲಾಧಿಕಾರಿಗಳ ಅನುಮತಿ

ಪಡೆದುಕೊಂಡಿದ್ದರು ಎನ್ನುವದು ನನಗೆ ಗೊತ್ತಿಲ್ಲ. ನನಗೆ ಪಂಚನಾಗಿ ಬರುವಂತೆ ತನಿಖಾಧಿಕಾರಿ ನೋಟೀಸ ಕೊಟ್ಟಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೋಲೀಸ ಠಾಣೆಗೆ ಹೋದಾಗ ಪಂಚನಾಮೆಗೆ ಸಹಿ ಪಡೆದುಕೊಂಡು ನಿಪಿ-34 ರಂತೆ ಫೋಟೋ ತೆಗೆದಿದ್ದಾರೆ ಅದರ ಬಗ್ಗೆ ನನಗೆ ಯಾವುದೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಪೋಲೀಸರ ಮಾತು ಕೇಳಿ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಪ್ರಕರಣದ ಬಗ್ಗೆ ಯಾವುದೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನಾನು ಕರ್ತವ್ಯದಲ್ಲಿ ಇದ್ದಾಗ ಪಂಚನಾಮೆಗೆ ಹೋಗಿದ್ದೆನು. ನಾನು ಪಂಚನಾಮೆ ಸಲುವಾಗಿ ಪೋಲೀಸ ಠಾಣೆಗೆ ಹೋಗಿದ್ದ ಬಗ್ಗೆ ಚಲನ ವಲನ ವಹಿಯಲ್ಲಿ ನಮೂದಿಸಿಲ್ಲ.

**ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ಎ ಟಿ ಓ ವಕೀಲರಿಂದಃ**

(ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು ಕೇಳಿಕೊಂಡಿದ್ದು ಅಳವಡಿಸಿಕೊಳ್ಳಲಾಯಿತು)

**ಮರು ವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೆ ಸರಿ ಇದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು,**
**ಕಲಘಟಗಿ.**